# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ | KANNADA POST | ಇದು ಸುದ್ದಿ ವಿಳಾಸ | ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 112 | Pages. 2 | Date: 04-04-2026, SATURDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 112 - ಪುಟಗಳು : 2 | 04-04-2026 | ಶನಿವಾರ | Ph: 8762954248 | ದರ : ₹1


## ಸಾಹಿತ್ಯ ಕೇವಲ ಪದಗಳ ಸಮೂಹವಲ್ಲ-ಅನುಭೂತಿ

### ಸಾಹಿತಿ ಶೈಲಜಾ ಹಾಸನ ಅಭಿಮತ | ಅಭಾಸಾಪನಿಂದ ಯುಗಾದಿ ಉತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಾಹಿತ್ಯವು ಕೇವಲ ಪದಗಳ ಸಮೂಹವಲ್ಲ, ಅದು ಒಂದು ಅನುಭೂತಿ. ಪುಸ್ತಕಗಳಿಗಿಂತ ಉತ್ತಮ ಸ್ನೇಹಿತ ಮತ್ತೊಬ್ಬನಿಲ್ಲ ಎಂದು ಸಾಹಿತಿ ಎನ್.ಶೈಲಜಾ ಹಾಸನ ಅಭಿಪ್ರಾಯಪಟ್ಟರು.

ನಗರದ ಹೇಮಾವತಿ ನಗರದಲ್ಲಿರುವ ಗಹನ ಯೋಗ ಕೇಂದ್ರದಲ್ಲಿ ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಜಿಲ್ಲಾ ಘಟಕದಿಂದ ಶುಕ್ರವಾರ ಯುಗಾದಿ ಉತ್ಸವ ಅಂಗವಾಗಿ ನಡೆದ ಚೈತ್ರದ ಚಿಗುರು ಸಾಹಿತ್ಯದ ಹೊನಲು ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದರು.

ಪುಸ್ತಕ ಓದುವುದರಿಂದ ಪ್ರಪಂಚದ ಅರಿವು ಬರುತ್ತದೆ, ಬದುಕಿನ ಮೌಲ್ಯಗಳು ಬೆಳೆಸಲ್ಪಡುತ್ತವೆ. ಸಾಹಿತ್ಯ ಓದಿದವರು ಸಮಾಜದಲ್ಲಿ ಬದಲಾವಣೆಗೆ ಕಾರಣರಾಗುತ್ತಾರೆ. ಕುಟುಂಬದಲ್ಲಿ ಹಿರಿಯರ ಕೊರತೆ, ಮೊಬೈಲ್ ಪ್ರಭಾವ, ಪಾಶ್ಚಿಮಾತ್ಯ ಸಂಸ್ಕೃತಿಯ ಅತಿಯಾದ ಅನುಕರಣೆಯಿಂದ ಮೌಲ್ಯಗಳು ಕ್ಷೀಣಿಸುತ್ತಿವೆ. ವೃದ್ಧಾಶ್ರಮಗಳ ಸಂಖ್ಯೆ ಹೆಚ್ಚುತ್ತಿದೆ. ಯುವಕರಲ್ಲಿ ಕ್ರೌರ್ಯ, ಮಕ್ಕಳಲ್ಲಿ ಸಹನೆ ಕೊರತೆ ಕಾಣಿಸುತ್ತಿದೆ. ಇಂತಹ ಸಂದರ್ಭದಲ್ಲಿ ನಮ್ಮ ಸಂಸ್ಕೃತಿ ಮತ್ತು ಮೌಲ್ಯಗಳನ್ನು ಉಳಿಸಿ ಬೆಳೆಸುವುದು ಅತ್ಯವಶ್ಯಕ ಎಂದು ಸಲಹೆ ನೀಡಿದರು.

ಪ್ರಾಚೀನ ಕಾಲದಿಂದ ಭಾರತೀಯರು ಹಬ್ಬ ಹರಿದಿನಗಳನ್ನು ಆಚರಿಸಿಕೊಂಡು ಬರುತ್ತಿದ್ದು ಎಲ್ಲಾ ಸಮಾರಂಭಗಳಿಗೆ ತನ್ನದೇಯಾದ ವೈಜ್ಞಾನಿಕ ಮಹತ್ವವಿದೆ. ಯುಗಾದಿಯ ಪ್ರಮುಖ ಅಂಶವಾದ ಬೇವು-ಬೆಲ್ಲ ಬದುಕಿನ ಸತ್ಯವನ್ನು ಸಾರುತ್ತದೆ.



ನೋವು ಮತ್ತು ನಲಿವುಗಳ ಸಮ್ಮಿಶ್ರಣವೇ ಜೀವನ. ಕಷ್ಟ-ಸುಖಗಳನ್ನು ಸಮಾನವಾಗಿ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಬೇವಿನ ಔಷಧೀಯ ಗುಣಗಳು ಮತ್ತು ಬೆಲ್ಲದ ಆರೋಗ್ಯಕರ ಗುಣಗಳು ಜೀವನದ ಸಮತೋಲನವನ್ನು ಸೂಚಿಸುತ್ತವೆ ಎಂದರು.

ಹಿಂದೂಗಳ ಹೊಸ ವರ್ಷವಾದ ಯುಗಾದಿ ಬದುಕಿಗೆ ಹೊಸ ದಿಕ್ಕು ತೋರಿಸುವ ಹಬ್ಬವಾಗಿದೆ. ಬದುಕಿನಲ್ಲಿ ಏಕತಾನತೆ ಇದ್ದರೂ, ಅದರ ಮಧ್ಯೆ ಸಂಭ್ರಮವನ್ನು ಮೂಡಿಸುವುದೇ ಹಬ್ಬಗಳ ಮಹತ್ವ. ಸಂಪ್ರದಾಯಗಳನ್ನು ಪಾಲಿಸಿ ಹಬ್ಬಗಳನ್ನು ಆಚರಿಸುವುದು ನಮ್ಮ ಸಂಸ್ಕೃತಿಯ ಶಕ್ತಿ.

ರಾಮಾಯಣ, ಮಹಾಭಾರತದಂತಹ ಮಹಾಕಾವ್ಯಗಳನ್ನು ಓದುವುದರಿಂದ ಕುಟುಂಬ ಮೌಲ್ಯಗಳು, ಜೀವನದ ಸಾಧಕ-ಬಾಧಕಗಳನ್ನು ಅರ್ಥ ಮಾಡಿಕೊಳ್ಳಬಹುದು.

ಇಂತಹ ಮೌಲ್ಯಗಳನ್ನು ನಮ್ಮ ಮಕ್ಕಳಿಗೆ ತಿಳಿಸುವ ಜವಾಬ್ದಾರಿ ನಮ್ಮದಾಗಿದೆ. ಕೂಡು ಕುಟುಂಬ ವ್ಯವಸ್ಥೆ ಮಕ್ಕಳಿಗೆ ಉತ್ತಮ ಸಂಸ್ಕಾರಗಳನ್ನು ನೀಡುತ್ತದೆಂದರು.

12ನೇ ಶತಮಾನದಲ್ಲಿ ವಚನ ಸಾಹಿತ್ಯದ ಮೂಲಕ ಸಮಾನತೆ, ಮಾನವೀಯತೆ ಮತ್ತು ಸಾಮಾಜಿಕ ನ್ಯಾಯದ ಮೌಲ್ಯಗಳನ್ನು ಪ್ರತಿಪಾದಿಸಲಾಯಿತು.

> ಯುಗಾದಿ ಎಂದರೆ ಯುಗದ ಆರಂಭ. ಇದು ಹೊಸ ವರ್ಷಕ್ಕೆ ದಾರಿ ದೀಪವಾಗುವ ಹಬ್ಬ. ಈ ಸಮಯದಲ್ಲಿ ನಾವು ಸಹ ಹೊಸ ಬದುಕಿನ ಮಾರ್ಗವನ್ನು ಆರಿಸಬೇಕು. ಸಿಹಿ, ಕಹಿ, ನೋವು, ನಲಿವು ಎಲ್ಲವನ್ನೂ ಸಮಭಾವದಿಂದ ಸ್ವೀಕರಿಸಿ ಬದುಕಬೇಕು.
>
> **– ಸುನಿತಾದೇವಿ ಪ್ರಸಾದ್, ಸ್ವಾಧ್ಯಾಯ ಪ್ರಮುಖ್**

ನಂತರ ಕುವೆಂಪು ಅವರು ಮಂತ್ರ ಮಾಂಗಲ್ಯ ಪರಿಕಲ್ಪನೆಯ ಮೂಲಕ ಸರಳ ವಿವಾಹ ಪದ್ಧತಿಯನ್ನು ಪರಿಚಯಿಸಿ, ಸ್ತ್ರೀ ಶೋಷಣೆಗೆ ತಡೆ ನೀಡುವ ಮಹತ್ವದ ಸಂದೇಶ ನೀಡಿದ್ದಾರೆ. ಇಂದಿಗೂ ಮಂತ್ರ ಮಾಂಗಲ್ಯ ಪದ್ಧತಿ ಅನುಸರಿಸಲ್ಪಡುತ್ತಿರುವುದು ಸಂತಸದ ವಿಷಯ ಎಂದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ಜಿಲ್ಲಾ ಕಾರ್ಯದರ್ಶಿ ನೇ.ರಾ. ಪ್ರಶಾಂತ್ ಕಾರ್ಯಕ್ರಮ ನಿರೂಪಿಸಿದರು. ಸದಸ್ಯರಾದ ಪುಷ್ಪಾ ಸ್ವಾಗತಿಸಿ, ಯೋಗೇಶ್ ವಂದನಾರ್ಪಣೆ ನೆರವೇರಿಸಿದರು. ಶೃಂಗೇರಿ ವಿಭಾಗೀಯ ಸಹ ಸಂಯೋಜಕ ಹೆಚ್.ಎನ್.ನಾಗೇಂದ್ರ, ಸಹ ಕಾರ್ಯದರ್ಶಿ ಮಲ್ಲಿಕಾರ್ಜುನ, ಸದಸ್ಯರಾದ ನಿಟ್ಟೂರು ಯೋಗೇಶ್, ನಿರಂಜನ, ಅನುಪ್ರಿಯ ಮತ್ತಿತರರಿದ್ದರು.

## ಏ.10 ರಿಂದ ಕೃತಕ ಕೈ-ಕಾಲು ಉಚಿತ ಜೋಡಣಾ ಶಿಬಿರ




**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ರಾಜೀವ್ ಆಯುರ್ವೇದ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಆವರಣದಲ್ಲಿ ಏ.10-12ರ ವರೆಗೆ 3 ದಿನ ಕೃತಕ ಕಾಲು-ಕೈ (ಮುಂಗೈ) ಉಚಿತ ಜೋಡಣಾ ಮಹಾ ಶಿಬಿರ, ಆರೋಗ್ಯ ತಪಾಸಣೆ ಹಾಗೂ 3 ಚಕ್ರದ ಸೈಕಲ್ ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ರೋಟರಿ ಕ್ಲಬ್ ಆಫ್ ಹಾಸನ್ ಹೊಯ್ಸಳದ ಮೋಹನ್ ಹಾಗೂ ಬೆಂಗಳೂರಿನ ಅನಿಲ್ ಸುವರ್ಣ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ದಿವ್ಯಾಂಗರು ಹಾಗೂ ಅಬಲರಿಗೆ ಅನುಕೂಲ ಆಗಲಿ ಎಂದು 6ನೇ ವರ್ಷದ ಶಿಬಿರ, ಆರೋಗ್ಯ ಉಚಿತ ತಪಾಸಣಾ ಶಿಬಿರ ಮತ್ತು ವಿಕಲಚೇತನರಿಗೆ 3 ಚಕ್ರದ ಸೈಕಲ್ ವಿತರಣೆ ಮಾಡಲಾಗುತ್ತಿದೆ. ಇವು ಅವರ ದೈನಂದಿನ ಜೀವನ ಸುಗಮಗೊಳಿಸಲು ನೆರವಾಗಲಿವೆ ಎಂದರು.

ದಿವ್ಯಾಂಗರಿಗೆ ಸ್ಥಳದಲ್ಲೇ ವೈದ್ಯಕೀಯ ತಪಾಸಣೆ ನಡೆಸಿ, ಅವರ ಅವಶ್ಯಕತೆಗಳಿಗನುಗುಣವಾಗಿ ಕೃತಕ ಕಾಲು, ಕೈಗಳು (ಮುಂಗೈ) ಹಾಗೂ ಪೋಲಿಯೋ ಪೀಡಿತರಿಗಾಗಿ ಕ್ಯಾಲಿಪರ್ಸ್‌ಗಳನ್ನು ಅಲ್ಲಿಯೇ ತಯಾರಿಸಿ ಸಂಪೂರ್ಣ ಉಚಿತವಾಗಿ ವಿತರಿಸಲಾಗುವುದು. ಈ ಶಿಬಿರಕ್ಕೆ ಬೆಂಗಳೂರು ಸೌತ್ ಪೆರೇಡ್ ರೋಟಸಿ, ಲೇಕ್ ಸೈಡ್ ಸೇರಿ ಅನೇಕ ಸಂಘಟನೆಯವರು ಕೈಜೋಡಿಸಿದ್ದಾರೆ ಎಂದರು. ಶಿಬಿರದಲ್ಲಿ ಭಾಗವಹಿಸುವವರಿಗೆ ಉಚಿತ ಆರೋಗ್ಯ ತಪಾಸಣೆಯೊಂದಿಗೆ ಅಗತ್ಯವಿರುವ ಚಿಕಿತ್ಸಾ ಸಲಹೆ ನೀಡಲಾಗುತ್ತದೆ ಎಂದರು.

ಮಾಹಿತಿಗಾಗಿ 98440-46527, 94496-44267 ಸಂಪರ್ಕಿಸಬಹುದಾಗಿದೆ ಎಂದು ಶಿಬಿರದ ಮಾಹಿತಿ ನೀಡಿದರು. ಈ ವೇಳೆ ರವಿ ಚಕ್ರವರ್ತಿ, ಸುಧಾಕರ್ ಪಾಂಡ್ಯಾನ್, ಡಾ.ರವಿಕುಮಾರ್, ಸುಧೀರ್ ಕುಮಾರ್, ವಿನೇಶ್ ಕುಮಾರ್ ಇದ್ದರು.

## ಕೌಟುಂಬಿಕ ಹಿನ್ನೆಲೆಯ 'ನಾನು ಕರುಣಾಕರ' ಸಿನಿಮಾ ತೆರೆಗೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತಂದೆ-ಮಗನ ಬಾಂಧವ್ಯ, ಮನಮುಟ್ಟುವ ವಿಭಿನ್ನ ಕಥಾ ಹಂದರವುಳ್ಳ ನಾನು ಕರುಣಾಕರ ಸಿನಿಮಾ ಏ.3 ರಿಂದ ಹಾಸನ ಸೇರಿ ರಾಜ್ಯಾದ್ಯಂತ ಬಿಡುಗಡೆಯಾಗಿ ಪ್ರೇಕ್ಷಕರ ಮನಗೆದ್ದಿದೆ ಎಂದು ನಿರ್ದೇಶಕ ಹಾಗೂ ನಾಯಕ ನಟ ಆರ್ಯನ್ ತೇಜಸ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ನವ್ ಪಾಪ್ ಕಾರ್ನ್ ಸಿನಿಮಾ ಬ್ಯಾನರ್ ಅಡಿ ನಿರ್ಮಾಣವಾಗಿರುವ ಈ ಚಿತ್ರವು ಪ್ರೇಕ್ಷಕರ ಮುಂದೆ ಬಂದಿದೆ. ಹೊಸಬರ ತಂಡದ ಪರಿಶ್ರಮ, ಹೆಚ್ಚಾಗಿ ಹಾಸನದ ಕಲಾವಿದರೇ ಇರುವ ಚಿತ್ರವು ಪ್ರತಿಯೊಬ್ಬರ ಮನೆಯಲ್ಲೂ ಕಂಡು ಬರುವ ತಂದೆ-ಮಗನ ಬಾಂಧವ್ಯವನ್ನು ಹೃದಯಸ್ಪರ್ಶಿಯಾಗಿ ತೆರೆದಿಡುವ ಪ್ರಯತ್ನವಾಗಿದೆ ಎಂದರು. ಮಗನ ಕನಸುಗಳನ್ನು ಸಾಕಾರಗೊಳಿಸಲು ಒಬ್ಬ ತಂದೆ ಎದುರಿಸುವ ಸವಾಲುಗಳು, ಅವನು ಅನುಭವಿಸುವ ನೋವು, ಕಷ್ಟಗಳು ಮತ್ತು ಮಾಡಬೇಕಾಗುವ ತ್ಯಾಗಗಳನ್ನು ಚಿತ್ರದಲ್ಲಿ ನೈಜವಾಗಿ ಕಟ್ಟಿಕೊಡಲಾಗಿದೆ. ಸೆಂಟಿಮೆಂಟ್ ಜೊತೆಗೆ ಹಾಸ್ಯ ಹಾಗೂ ಭಾವನಾತ್ಮಕ ಸನ್ನಿವೇಶಗಳ ಸಮತೋಲನ ಈ ಚಿತ್ರದ ಮತ್ತೊಂದು ವಿಶೇಷತೆ ಎಂದರು.




ಪ್ರೇಕ್ಷಕರನ್ನು ಒಂದೆಡೆ ನಗಿಸುವಂತೆಯೇ ಮತ್ತೊಂದೆಡೆ ಕಣ್ಣೀರಿಳಿಸುವಂತಹ ಕ್ಷಣಗಳನ್ನು ಚಿತ್ರ ಹೊಂದಿದ್ದು, ಕುಟುಂಬ ಸಮೇತವಾಗಿ ನೋಡುವಂತಹ ಚಿತ್ರವಾಗಿ ಮೂಡಿಬಂದಿದೆ.

ಇಂದಿನ ವೇಗದ ಜೀವನದಲ್ಲಿ, ತಂತ್ರಜ್ಞಾನ ಪ್ರಭಾವದಲ್ಲಿ, ಕುಟುಂಬ ಸಂಬಂಧಗಳು ಮತ್ತು ಬಾಂಧವ್ಯಗಳ ಮಹತ್ವ ನಿಧಾನವಾಗಿ ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಈ ಚಿತ್ರವು ಸಮಾಜಕ್ಕೆ ಒಂದು ಸಂದೇಶ ನೀಡುವ ಪ್ರಯತ್ನ ಮಾಡುತ್ತದೆ. ಏ.9 ರ ವರೆಗೆ ಜಿಲ್ಲೆಯ 14 ವರ್ಷದೊಳಗಿನ ಮಕ್ಕಳಿಗೆ ಉಚಿತ ವೀಕ್ಷಣೆಗೆ ವ್ಯವಸ್ಥೆ ಮಾಡಲಾಗಿದೆ ಎಂದರು.

ನಾಯಕಿ ರಾಧ ಭಾಗವತಿ ಮಾತನಾಡಿ, ಇದು ಫ್ಯಾಮಿಲಿ ಕಂಟೆಂಟ್ ಉಳ್ಳ ಸಿನಿಮಾ, ತಂದೆ-ಮಗ, ತಾಯಿ-ಮಗ, ಗಂಡ-ಹೆಂಡತಿ ಬಾಂಧವ್ಯ ಅದ್ಭುತವಾಗಿ ಮೂಡಿ ಬಂದಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ನಿರ್ಮಾಪಕ ವೈಭವ್ ಸುರೇಶ್, ನವೀನ್ ನಾರಾಯಣ್, ಬಾಲ ನಟ ಮಾಸ್ಟರ್ ಭವಿಷ್, ಎನ್.ಸುಹಾಸ್, ನಿರ್ಮಾಪಕ ಸುರೇಶ್ ಇದ್ದರು.

## ಮಹಿಳೆ ವಿವಸ್ತ್ರಗೊಳಿಸಿ ಹಲ್ಲೆ: ಆರು ಜನರ ಬಂಧನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಹಳೇಬೀಡು ಹೋಬಳಿಯ ಹಂಚೀಹಳ್ಳಿ ಗ್ರಾಮದಲ್ಲಿ ಜಮೀನಿಗೆ ಹೋಗುವ ದಾರಿ ವಿವಾದವನ್ನು ಮುಂದಿಟ್ಟುಕೊಂಡು ಮಹಿಳೆಯನ್ನು ವಿವಸ್ತ್ರಗೊಳಿಸಿ ಥಳಿಸಿರುವ ಪ್ರಕರಣ ತಡವಾಗಿ ಬೆಳಕಿಗೆ ಬಂದಿದ್ದು, ಹಲ್ಲೆ ಮಾಡಿರುವ ಆರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

ಜಮೀನಿಗೆ ಹೋಗುವ ದಾರಿಯ ಬಗ್ಗೆ ಶಿವಕುಮಾರ್ ಮತ್ತು ಕುಮಾರ್ ಅವರ ಕುಟುಂಬಗಳ ನಡುವೆ ದಶಕದ ಹಿಂದೆ ಆರಂಭವಾಗಿದ್ದ ಸಣ್ಣ ಜಗಳವು, ಹಲವು ವರ್ಷ ಮುಂದುವರಿದು ಇಬ್ಬರ ನಡುವೆ ಶೀತಲ ಸಮರ ನಡೆಯುತ್ತಿತ್ತು, ಹಳೆಯ ವೈಷಮ್ಯವು ತಾರಕಕ್ಕೇರಿದ ಪರಿಣಾಮ ಮಾ.21 ರಂದು ಮತ್ತೊಮ್ಮೆ ಶುರುವಾದ ಜಗಳ ವಿಕೋಪಕ್ಕೆ ಹೋಗಿ ಶಿವಕುಮಾರ್ ಮತ್ತು ಗುಂಪು, ಕುಮಾರ್ ಎಂಬವರ ಪತ್ನಿಯನ್ನು ವಿವಸ್ತ್ರಗೊಳಿಸಿ ಥಳಿಸಿತ್ತು. ವ್ಯಕ್ತಿಯೊಬ್ಬರು ಚಿತ್ರೀಕರಿಸಿದ್ದ ಹೊಡೆದಾಟದ ವಿಡಿಯೊ ಶುಕ್ರವಾರ ಎಲ್ಲೆಡೆ ವೈರಲ್ ಆಗಿದ್ದು, ಪೊಲೀಸರು ತಕ್ಷಣ ಕ್ರಮವಹಿಸಿ ಹಲ್ಲೆ ಮಾಡಿರುವ ಆರೋಪಿಗಳನ್ನು ಬಂಧಿಸಿದ್ದಾರೆ.

ಹಂಚೀಹಳ್ಳಿ ಗ್ರಾಮದಲ್ಲಿರುವ ತಮ್ಮ ಮನೆಗೆ ಸಂಪರ್ಕಿಸಲು ಸರಿಯಾದ ದಾರಿ ಇಲ್ಲದ ಕಾರಣ ಕುಮಾರ್ ಕುಟುಂಬದವರು ಕಂದಾಯ ಇಲಾಖೆಗೆ ದಾರಿ ಮಾಡಿಕೊಡುವಂತೆ ಅರ್ಜಿ ಸಲ್ಲಿಸಿದ್ದರು. ಪ್ರಸ್ತುತ ವಿವಾದ ಸ್ವರೂಪ ಪಡೆದಿರುವ ಜಾಗವು ಸರ್ಕಾರಿ ಸ್ವಾಮ್ಯದ್ದಾಗಿದ್ದು, ರಸ್ತೆ ಮಾಡಿಕೊಡಲು ಯಾವುದೇ ಅಡ್ಡಿ ಇರುವುದಿಲ್ಲ ಎಂದು ಪರಿಶೀಲನೆಯ ವೇಳೆ ಅಧಿಕಾರಿಗಳು ತಿಳಿಸಿ, ದಾರಿ ನಿರ್ಮಾಣಕ್ಕೂ ಆದೇಶ ನೀಡಿದ್ದರು. ಇದೇ ವೇಳೆ ಸ್ಥಳದಲ್ಲಿದ್ದ ವಿರೋಧಿಗಳ ಗುಂಪು ಅಧಿಕಾರಿಗಳನ್ನು ನಿಂದಿಸಿದ್ದಲ್ಲದೆ ರಸ್ತೆ ನಿರ್ಮಿಸಲು ಬಿಡುವುದಿಲ್ಲ ಎಂದು ಧಮಕಿ ಹಾಕಿದ್ದರು.



ಇಷ್ಟಾಗಿಯೂ ಕುಮಾರ್ ಅವರು ತಮ್ಮ ಮನೆಗೆ ಸಂಪರ್ಕ ರಸ್ತೆ ನಿರ್ಮಿಸಿಕೊಳ್ಳಲು ಸ್ವತಂತ್ರರಿದ್ದಾರೆ ಎಂದು ಪೊಲೀಸರೂ ತಿಳಿಸಿದ್ದರು. ಅಧಿಕಾರಿಗಳ ಸೂಚನೆಯ ಮೇರೆಗೆ ಮಾ. 21 ರಂದು ವಿವಾದಿತ ಜಾಗಕ್ಕೆ ಮಣ್ಣು ಹೊಡೆಸಿ ದಾರಿ ಮಾಡಿಕೊಳ್ಳಲು ಯತ್ನಿಸಿದ ಸಂದರ್ಭದಲ್ಲಿ, ಶಿವಕುಮಾರ್ ಮತ್ತವರ ಗುಂಪು ಸ್ಥಳಕ್ಕೆ ಬಂದು ಕುಮಾರ್ ಅವರ ಕುಟುಂಬದ ಮಹಿಳೆಯ ಮೇಲೆ ಹಲ್ಲೆ ನಡೆಸಿ ನಿಂದಿಸಿರುವುದು ವಿಡಿಯೋದಲ್ಲಿ ಸಾಬೀತಾಗಿದೆ.

ಪ್ರಸ್ತುತ ವಿವಾದವು ಜಾತಿನಿಂದನೆ ಸ್ವರೂಪವನ್ನು ಪಡೆದುಕೊಂಡಿದ್ದು ಎರಡೂ ಕುಟುಂಬದವರು ಪರಸ್ಪರ ದೂರು ದಾಖಲಿಸಿದ್ದಾರೆ. ಹಲ್ಲೆಗೆ ಸಂಬಂಧಿಸಿದಂತೆ ಆರು ಆರೋಪಿಗಳನ್ನು ಹಳೇಬೀಡು ವೃತ್ತ ನಿರೀಕ್ಷಕ ಜಗದೀಶ್ ಹಾಗೂ ಪಿಎಸ್ಐ ಮಂಜುನಾಥ್ ವಿಚಾರಣೆ ನಡೆಸಿ ಬಂಧಿಸಿದ್ದು, ವಿವಿಧ ಸೆಕ್ಷನ್ ಗಳಡಲ್ಲಿ ಪ್ರಕರಣ ದಾಖಲಿಸಿದ್ದಾರೆ. ಇನ್ನೂ 4 ಆರೋಪಿಗಳನ್ನು ಬಂಧಿಸಲು ಪೊಲೀಸ್ ಸಿಬ್ಬಂದಿ ಬಲೆ ಬೀಸಿದ್ದಾರೆ.

ಕುಮಾರ್ ಮತ್ತು ಶಿವಕುಮಾರ್ ಕುಟುಂಬಗಳ ನಡುವಿನ ಆಸ್ತಿ ಕಲಹ ಮತ್ತು ರಾಜಕೀಯ ವೈಷಮ್ಯವೂ ಹೊಡೆದಾಟಕ್ಕೆ ಕಾರಣವಾಗಿದೆ ಎಂಬ ಮಾತು ಕೇಳಿ ಬಂದಿದೆ. ಹಳೇಬೀಡು ವೃತ್ತ ನಿರೀಕ್ಷಕ ಜಗದೀಶ್ ಅವರ ನೇತೃತ್ವದ ತಂಡವು ತನಿಖೆಯನ್ನು ಮುಂದುವರಿಸಿದೆ.

## ಸಮಾಜ ಅಭಿವೃದ್ಧಿಗೆ ಮಹಿಳೆಯರ ಕೊಡುಗೆ ಅಧಿಕ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕ್ಷೇತ್ರದ ಶಾಸಕನಾಗಿ ಆಯ್ಕೆಯಾಗಿರುವ ನಾನು ಸಮಾಜದ ಪ್ರತಿಯೊಬ್ಬರ ಕಷ್ಟ ನಷ್ಟಗಳನ್ನು ಅರಿತು ಸ್ಪಂದಿಸುವ ಕೆಲಸ ಮಾಡುತ್ತಿದ್ದೇನೆಂದರೆ ಅದಕ್ಕೆ ಮಹಿಳೆಯರ ಆಶೀರ್ವಾದವೇ ಕಾರಣ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಹೇಳಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಕಚೇರಿಯಲ್ಲಿ ಏರ್ಪಡಿಸಿದ್ದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಸಾಧನಾ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದ ಅವರು, ಮಹಿಳೆಯರಿಗೆ ಗೌರವ ಕೊಡುವುದು ಪ್ರತಿಯೊಬ್ಬರ ಕರ್ತವ್ಯ. ಕುಟುಂಬ ನಿರ್ವಹಣೆಯಲ್ಲಿ ಸ್ತ್ರೀಯರ ಪಾತ್ರ ಮಹತ್ವದ್ದಾಗಿದೆ. ಯಾವ ಮನೆಯಲ್ಲಿ ಮಹಿಳೆ ಖುಷಿಯಿಂದ ಇರುತ್ತಾರೋ ಅಂತಹ ಕುಟುಂಬಗಳು ಸುಭಿಕ್ಷವಾಗಿರುತ್ತವೆ ಎಂದರು.




ನಾನು ಶಾಸಕನಾಗಿ ಆಯ್ಕೆಯಾಗಲು ನಮ್ಮ ತಾಯಿ, ಧರ್ಮ ಪತ್ನಿ, ಸಹೋದರಿ ಹೀಗೆ ಎಲ್ಲರ ಸಹಕಾರವಿದೆ. ಜನಪ್ರತಿನಿಧಿಯಾಗಿ ಆಯ್ಕೆಯಾದ ಬಳಿಕವೂ ಸಹೋದರಿಯರ ಸಂಖ್ಯೆ ಹೆಚ್ಚಿದೆ ಎಂದರೆ ತಪ್ಪಾಗಲಾರದು. ಪ್ರತಿ ವರ್ಷ ನನಗೆ ರಕ್ಷಾ ಬಂಧನ ದಿನ ರಾಖಿ ಕಟ್ಟುವವರ ಸಂಖ್ಯೆ ಹೆಚ್ಚುತ್ತಲೇ ಇದ್ದು ನನ್ನ ಕುಟುಂಬದ ಸದಸ್ಯರ ಸಂಖ್ಯೆ ವಿಶಾಲವಾಗಿದೆ. ಈ ಅವಕಾಶ ಮಾಡಿಕೊಟ್ಟ ಎಲ್ಲರಿಗೂ ಕೃತಾರ್ಥನಾಗಿರುತ್ತೇನೆ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಇನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸಲು ಕ್ರಮ ವಹಿಸಲಾಗುವುದೆಂದು ಭರವಸೆ ನೀಡಿದರು.

ಜಿಲ್ಲಾ ಸರ್ಕಾರಿ ನೌಕರರ ಸಂಘದ ಬಿ.ಪಿ.ಕೃಷ್ಣೇಗೌಡ ಮಾತನಾಡಿ, ಮಹಿಳೆಯರಿಗೂ ಪುರುಷರಷ್ಟೇ ಸಮಾನ ಅವಕಾಶಗಳನ್ನು ಕಲ್ಪಿಸಿಕೊಡಬೇಕೆಂಬ ಉದ್ದೇಶದಿಂದ ಪ್ರತಿವರ್ಷ ಮಹಿಳಾ ದಿನ ಹಮ್ಮಿಕೊಳ್ಳಲಾಗುತ್ತದೆ. ಸೃಷ್ಟಿಯಲ್ಲಿ ಮಹಿಳೆಯ ಪಾತ್ರ ಹೆಚ್ಚಿದೆ. ಭೂಮಿ ಹಾಗು ಮಹಿಳೆ ಇಬ್ಬರೂ ಸೃಷ್ಟಿಕರ್ತರಾಗಿದ್ದಾರೆ. ಅನ್ನ ನೀಡುವ ಭೂಮಿಯನ್ನು ಎಷ್ಟು ಪ್ರೀತಿಸಿ, ಗೌರವಿಸುತ್ತವೆಯೋ ಅಷ್ಟೇ ಪ್ರಾಧಾನ್ಯತೆಯನ್ನು ಹೆಣ್ಣಿಗೂ ನೀಡಬೇಕು ಎಂದರು.

ಮಹಿಳೆ ಎಂದರೆ ಸಹನಾಶೀಲರು. ಸ್ತ್ರೀಯರ ಕಷ್ಟ ಸುಖ ವಿಚಾರಿಸುವುದು ಪುರುಷನ ಆದ್ಯ ಕರ್ತವ್ಯ. ಸಮಾಜದ ಪ್ರತಿಯೊಂದು ಹಂತದಲ್ಲೂ ಮಹಿಳೆಯರು ತಮ್ಮದೇಯಾದ ಸಾಧನೆ ಮೆರೆದಿದ್ದಾರೆ. ರಾಜಕೀಯ, ಶಿಕ್ಷಣ, ಆರೋಗ್ಯ, ಬಾಹ್ಯಾಕಾಶ ಹಾಗೂ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಮಹಿಳೆಯರು ಎಲ್ಲರಿಗೂ ಪ್ರೇರಣೆಯಾಗಬೇಕೆಂದರು.

ವಿವಿಧ ಇಲಾಖೆಯ ಮಹಿಳಾ ನೌಕರರನ್ನು ಸನ್ಮಾನಿಸಲಾಯಿತು. ಜಿಲ್ಲಾ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಹಾಜರಿದ್ದರು.

## ಸ್ವಾವಲಂಬಿ ಬದುಕಿಗೆ ಕೌಶಲ್ಯವೇ ಮೂಲಾಧಾರ: ಬಾನು ಮುಷ್ತಾಕ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮನುಷ್ಯ ಸ್ವಾವಲಂಬಿಯಾಗಿ ಬದುಕಲು ಕೌಶಲ್ಯ ಅತಿ ಅಗತ್ಯ. ಯಾರ ಮುಂದೆಯೂ ಕೈಚಾಚದೆ ಆರ್ಥಿಕವಾಗಿ ಸದೃಢರಾಗಲು ಕೌಶಲ್ಯಾಧಾರಿತ ಶಿಕ್ಷಣ ಸಹಕಾರಿ ಎಂದು ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

ನಗರದ ಕಲಾಭವನದಲ್ಲಿ ಆಯೋಜಿಸಲಾಗಿದ್ದ ದಿ ಇಂಟೆಲೆಕ್ಚುಯಲ್ಸ್ ಶಾಲೆಯ ವಾರ್ಷಿಕೋತ್ಸವದಲ್ಲಿ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಯಾವುದೇ ಕಾರಣಕ್ಕೂ ವೃತ್ತಿಯನ್ನು ಕಡೆಗಣಿಸಬಾರದು. ವಿದ್ಯೆಯ ಜೊತೆಗೆ ವೃತ್ತಿಯನ್ನು ಸಮನ್ವಯಗೊಳಿಸಿ ಬದುಕಿನಲ್ಲಿ ಮುನ್ನಡೆಯಲು ಅನೇಕ ಅವಕಾಶಗಳಿವೆ ಎಂದು ತಿಳಿಸಿದರು.

ವಿದ್ಯೆ ಕೇವಲ ಹಣ ಗಳಿಸುವ ಸಾಧನವಾಗಿಯೇ ಅಲ್ಲ, ಅದು ವ್ಯಕ್ತಿತ್ವವನ್ನು ರೂಪಿಸಿ ಜೀವನಕ್ಕೆ ಶೋಭೆ ನೀಡುತ್ತದೆ ಹಾಗೂ ಸಮುದಾಯಕ್ಕೆ ಶಕ್ತಿ ತುಂಬುತ್ತದೆ ಎಂದು ಹೇಳಿದರು.

ಮುಸ್ಲಿಂ ಸಮಾಜ ತನ್ನ ಶಕ್ತಿ ಮೀರಿ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುತ್ತಿರುವುದು ಶ್ಲಾಘನೀಯ. ಮಕ್ಕಳಲ್ಲಿ ಬುದ್ಧಿಶಕ್ತಿ ಹಾಗೂ ಶ್ರಮಿಸುವ ಮನೋಭಾವ ಸಾಕಷ್ಟಿದೆ. ಆದರೆ, ಮೊಬೈಲ್ ಬಳಕೆಯಿಂದ ದೂರ ಇಟ್ಟು ಅವರ ಗಮನವನ್ನು ವಿದ್ಯಾಭ್ಯಾಸದ ಕಡೆಗೆ ಕೇಂದ್ರೀಕರಿಸಬೇಕು ಎಂದು ಸಲಹೆ ನೀಡಿದರು.



ಇಂದಿನ ಮುಸ್ಲಿಂ ಸಮಾಜ ರಾಜಕೀಯ ಪ್ರಜ್ಞೆಯನ್ನು ಬೆಳೆಸಿಕೊಳ್ಳಬೇಕು. ಸಮಾಜದಲ್ಲಿ ನಾಯಕತ್ವದ ಕೊರತೆ ಕಂಡು ಬರುತ್ತಿದ್ದು, ಅದನ್ನು ಎಲ್ಲರೂ ಸೇರಿ ನಿವಾರಿಸಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಹಿರಿಯ ಪತ್ರಕರ್ತ ಮಲ್ನಾಡ್ ಮೆಹಬೂಬ್, ಸಂಸ್ಥೆಯ ಮುಖ್ಯಸ್ಥ ರಫಿಉಲ್ಲಾ ಫಿಕರ್ ಅಹಮದ್, ಇಂತಿಯಾಜ್, ಶಾಲೆಯ ಮುಖ್ಯೋಪಾಧ್ಯಾಯೆ ಶಮಾ ಅಮ್ರೀನ್ ಉಪಸ್ಥಿತರಿದ್ದರು. ಶಾಲಾ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳು ಗಮನ ಸೆಳೆದವು. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಿ ಗೌರವಿಸಲಾಯಿತು.

## ಪಠ್ಯಪುಸ್ತಕ ಅಧ್ಯಯನ ಜೊತೆ ಕ್ರೀಡೆಯಲ್ಲಿ ಪಾಲ್ಗೊಳ್ಳಿ

ಹಾಸನ: ಮಕ್ಕಳನ್ನು ಪಠ್ಯಪುಸ್ತಕ ಅಧ್ಯಯನಕ್ಕೆ ಸೀಮಿತಗೊಳಿಸದೆ ಕ್ರೀಡಾಕೂಟಗಳಲ್ಲಿ ತೊಡಗುವಂತೆ ಪ್ರೇರೆಪಿಸಬೇಕೆಂದು ಲೇಖಕಿ ಕಮಲಮ್ಮ ಸಲಹೆ ನೀಡಿದರು. ನಗರದ ಸ್ಕೌಟ್ಸ್ ಅಂಡ್ ಗೈಡ್ಸ್ ಭವನದಲ್ಲಿ ಹಮ್ಮಿಕೊಂಡಿರುವ ತಾಲ್ಲೂಕು ಮಟ್ಟದ ಬೇಸಿಗೆ ಶಿಬಿರದಲ್ಲಿ ಶುಕ್ರವಾರ ಮಾತನಾಡಿದ ಅವರು, ಆಟೋಟಗಳಲ್ಲಿ ಭಾಗವಹಿಸುವುದರಿಂದ ಮಕ್ಕಳ ದೈಹಿಕ ಸದೃಢತೆ ಹೆಚ್ಚಿಸಬಹುದು. ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸುವ, ಪರಸ್ಪರ ಪರಿಚಯ, ಸ್ನೇಹ ಸೌಹಾರ್ದತೆಗೆ ಕ್ರೀಡೆ ನೆರವಾಗುತ್ತದೆ ಎಂದರು.

ಗ್ಯಾರಳ್ಳಿ ತಮ್ಮಯ್ಯ ವರ್ಡ್ ಅಕಾಡೆಮಿಯ ಗೈಡ್ ಶಿಕ್ಷಕಿ ಹರ್ಷಿತ ಹಾಗೂ ರೋವರ್ ಲೀಡರ್ ಬಿ.ಪಿ. ಗಿರೀಶ್ ಅವರು ಮಕ್ಕಳಿಗೆ ಏಕಾಗ್ರತೆ, ಸಮಯ ಹೊಂದಾಣಿಕೆ , ಕೌಶಲಾಭಿವೃದ್ಧಿಗೆ ಪೂರಕವಾಗುವ ಆಟಗಳನ್ನು ಆಡಿಸಿದರು. ಸ್ಕೌಟ್ಸ್ ಅಂಡ್ ಗೈಡ್ಸ್ ಸ್ಥಳೀಯ ಸಂಸ್ಥೆ ಕಾರ್ಯದರ್ಶಿ ವನಜಾಕ್ಷಿ, ಕಾಂಚನಮಾಲಾ, ಸಂಕೇತ ಇತರರಿದ್ದರು.



# ಶ್ರವಣಬೆಳಗೊಳದಲ್ಲಿ ನೇಮಿನಾಥ ತೀರ್ಥಂಕರರ ಪಂಚ ಕಲ್ಯಾಣೋತ್ಸವ

## ಆಕರ್ಷಕ ಮೆರವಣಿಗೆ | ಸ್ವಾಮೀಜಿಗಳು, ರಾಜಕಾರಣಿಗಳು ಭಾಗಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಕ್ಷೇತ್ರದಲ್ಲಿ ಭಗವಾನ್ ನೇಮಿನಾಥ ತೀರ್ಥಂಕರರ ವಾರ್ಷಿಕ ಪಂಚಕಲ್ಯಾಣ ಮಹಾರಥೋತ್ಸವದ ನಿಮಿತ್ತ ನೇಮಿನಾಥ ತೀರ್ಥಂಕರ, ಕ್ಷೇತ್ರದ ಅಧಿದೇವತೆ ಯಕ್ಷಿ ಕೂಷ್ಮಾಂಡಿನಿ ದೇವಿಯ ಮಹಾರಥೋತ್ಸವವು ಪೀಠಾಧಿಪತಿಗಳಾದ ಸ್ವಸ್ತಿಶ್ರೀ ಅಭಿನವ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿಯವರ ನೇತೃತ್ವದಲ್ಲಿ ಗುರುವಾರ ಅದ್ದೂರಿಯಾಗಿ ನೆರವೇರಿತು.

ರಥಯಾತ್ರೆಗೂ ಮುಂಚಿತವಾಗಿ ಶ್ರೀಗಳು ಹೊರ ವಲಯದಲ್ಲಿರುವ ಮೂಲ ಸ್ಥಾನ ಜಕ್ಕಳಮ್ಮ ದೇವಿಯ ಸನ್ನಿಧಿ, ಕ್ಷೇತ್ರಪಾಲ ಬ್ರಹ್ಮ ದೇವರಿಗೆ ಪೂಜೆ ಸಲ್ಲಿಸಿ ಜೈನ ಮಠದಲ್ಲಿರುವ ಕೂಷ್ಮಾಂಡಿನಿ ದೇವಿಗೆ ಮಂಗಳಾರತಿ ಮಾಡಲಾಯಿತು.

ಹುಳ್ಳ ಸಭಾ ಮಂಟಪದಲ್ಲಿ ನೇಮಿನಾಥ ಸ್ವಾಮಿ ಯಕ್ಷಿ ಕೂಷ್ಮಾಂಡಿನಿ ದೇವಿ ಹಾಗು ಸರ್ವಾಹ್ಣ ಯಕ್ಷರಿಗೆ ಧಾರ್ಮಿಕ ವಿಧಿಗಳನ್ನು ನಡೆಸಲಾಯಿತು. ಜೈನ ಮಠದ ಮುಂಭಾಗದಲ್ಲಿ ಸಿದ್ಧಗೊಂಡಿದ್ದ ದೊಡ್ಡ ರಥಕ್ಕೆ ಉತ್ಸವ ತೀರ್ಥಂಕರರನ್ನು ಮತ್ತು ದೇವಿಯನ್ನು ವಿವಿಧ ಮಂಗಲ ವಾದ್ಯಗಳೊಂದಿಗೆ ಆಹ್ವಾನಿಸಿ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.

ರಥ ನಿರ್ವಾಹಕರು, ಸೇವಾಕರ್ತರು ಎಲ್ಲಾ ಇಲಾಖೆಗಳ ಮುಖ್ಯಸ್ಥರಿಗೆ ಆಗಮಿಸಿದ್ದ ಗಣ್ಯಾತಿ ಗಣ್ಯರಿಗೆ ಮಂಗಲಾಕ್ಷತೆಯ ಶ್ರೀಫಲಗಳೊಂದಿಗೆ ಚಾರುಕೀರ್ತಿ ಶ್ರೀಗಳು ಗೌರವಿಸಿದರು. ಮಹಾರಥಕ್ಕೆ ಪೂಜೆ ಸಲ್ಲಿಸಿದ ಶ್ರೀಗಳು ಈಡುಗಾಯಿ ಒಡೆದ ನಂತರ ಮೆರವಣಿಗೆಗೆ ಚಾಲನೆ ನೀಡುತ್ತಿದ್ದಂತೆ ರಥದ ಹಗ್ಗ ಹಿಡಿದು ಮೊದಲು ಎಳೆಯಲು ಭಕ್ತ ಸಮೂಹ ಮುಗಿಬಿದ್ದರು. ರಥ ಚಕ್ರ ಉರುಳುತ್ತಿದ್ದಂತೆ ನಗಾರಿ ವಾದನ, ವಿವಿಧ ಮಂಗಲ ವಾದ್ಯ, ಗಂಟಾನಾದ, ಮೈಸೂರು ಬ್ಯಾಂಡ್ ವಾದನ, ಚಂಡೆವಾದ್ಯ, ಮಹಾರಾಷ್ಟ್ರದ ಝುಂ ಝುಂ ಪಥಕ, ಸ್ಥಳೀಯರ ಬ್ಯಾಂಡ್ ವಾದನ ಮೊಳಗಿದವು.



ಅಹಿಂಸಾ ಪರಮೋ ಧರ್ಮ ಪ್ರಭಾವಳಿಯೋಮದಿಗೆ ಮೆರವಣಿಗೆ ಸಾಗುತ್ತಿದ್ದಂತೆ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಭಕ್ತರು ಮತ್ತು ಸುತ್ತಮುತ್ತಲಿನ ಗ್ರಾಮಗಳ ಜನರು ಹಣ್ಣು ಕಾಯಿ, ಹೂ, ದವನ ಸಹಿತ ರಥಕ್ಕೆ ಪೂಜೆ ಸಲ್ಲಿಸಿದರು. ಯುವಕ ಯುವತಿಯರು ಬಾಳೆ ಹಣ್ಣು ದವನವನ್ನು ರಥದ ಕಳಸಕ್ಕೆ ತೂರುತ್ತಿದ್ದರು. 4 ಗಂಟೆಯ ನಂತರ ಗ್ರಾಮಂತರ ಪ್ರದೇಸದಿಂದ ಬಂದಂತಹ ಭಕ್ತರು ಜನರು ರಥಯಾತ್ರೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಕಲಾತಂಡಗಳು ಮೆರಗು ತಂದರೆ ಯುವಕ ಯುವತಿಯರು ನೃತ್ಯ ಮಾಡುತ್ತಿದ್ದರು.

ಪೂಜೆಯ ನೇತೃತ್ವವನ್ನು ನಂದಕುಮಾರ್ ಶಾಸ್ತ್ರಿ, ಪ್ರೇಮಕುಮಾರ್, ಜಿನೇಶ್ ಕುಮಾರ್, ಜೀವೇಂದ್ರ ಕುಮಾರ್ ಶಾಸ್ತ್ರಿ, ಅನೂಪ್, ಸನ್ಮತಿ, ವಿಹಾರ್ ವಹಿಸಿದ್ದರು.

### ರಥೋತ್ಸವದಲ್ಲಿ ಗಣ್ಯರು ಭಾಗಿ

ಶ್ರವಣಬೆಳಗೊಳ ಕ್ಷೇತ್ರದ ಶಾಸಕ ಸಿ.ಎನ್.ಬಾಲಕೃಷ್ಣ ರಥೋತ್ಸವದಲ್ಲಿ ಭಾಗವಹಿಸಿ ಶ್ರೀಗಳಿಂದ ಆಶೀರ್ವಾದ ಪಡೆದರು. ಶಾಸಕರು ವೈಯಕ್ತಿಕವಾಗಿ ಕ್ಷೇತ್ರಕ್ಕೆ ಆಗಮಿಸಿದ್ದ ಜನತೆಗೆ ಉಚಿತವಾಗಿ 15 ಸಾವಿರ ಲೀಟರ್ ಶುದ್ಧ ಕುಡಿಯುವ ನೀರು ಭೋಜನಕ್ಕೆ ಮತ್ತು ಕುಡಿಯಲು ಮಜ್ಜಿಗೆಯ ವ್ಯವಸ್ಥೆಯನ್ನು ಕಲ್ಪಿಸಿದ್ದರು. ಇವರು ಜೈನ ಮಠದ ಹಿಂಭಾಗದಲ್ಲಿರುವ ಭೋಜನಾಲಯ ರಸ್ತೆಯನ್ನು ಓಡಾಡಲು ಅನುಕೂಲವಾಗುವಂತೆ ಕಲ್ಪಿಸಿದ್ದಾರೆ.

ಶಾಸಕ ಹೆಚ್.ಪಿ.ಸ್ವರೂಪ್, ವಿಧಾನ ಪರಿಷತ್ ಸದಸ್ಯ ವಿವೇಕಾನಂದ, ಮಾಜಿ ಎಂಎಲ್‌ಸಿ ಗೋಪಾಲಸ್ವಾಮಿ, ಪತ್ನಿ ಗೀತಾ ಗೋಪಾಲಸ್ವಾಮಿ ಭಾಗವಹಿಸಿ ಶ್ರೀಗಳಿಂದ ಆಶೀರ್ವಾದ ಪಡೆದರು.

### ಆಕರ್ಷಕ ಮೆರವಣಿಗೆ

ಆಚಾರ್ಯ ಅನೇಕಾಂತ ಸಾಗರ ಮಹಾರಾಜರು ಮತ್ತು ಸಂಘಸ್ಥ ತ್ಯಾಗಿಗಳು ಸಾನಿಧ್ಯ ವಹಿಸಿ ರಥದ ಮೆರವಣಿಗೆಯಲ್ಲಿ ಭಾಗಿಯಾಗಿದ್ದು ವಿಶೇಷವಾಗಿತ್ತು. ಸಾರ್ವಜನಿಕರಿಗೆ ಸಿಹಿ ಭೋಜನದ ವ್ಯವಸ್ಥೆಯನ್ನು ಕ್ಷೇತ್ರದಾಡಳಿತ ಮಂಡಳಿ ಮಾಡಿತ್ತು. ಪಾನಕ ಮತ್ತು ಮಜ್ಜಿಗೆ ವ್ಯವಸ್ಥೆಯನ್ನು ಶ್ರವಣಬೆಳಗೊದ ಜಿ.ಸಿ.ಮಾಣಿಕ್ ಚಂದ್ರಯ್ಯ ಮತ್ತು ಕುಟುಂಬ ವರ್ಗದವರು ವಹಿಸಿದ್ದರು. ರಥ ಸಾಗುವ ಭಂಡಾರ ಬಸದಿಯ ಸುತ್ತಮುತ್ತಲಿನ ಭಕ್ತರು ಸಾರ್ವಜನಿಕರಿಗೆ ನೀರು ಮಜ್ಜಿಗೆ ತಂಪು ಪಾನೀಯಗಳ ವ್ಯವಸ್ಥೆಯನ್ನು ತಮ್ಮ ತಮ್ಮ ಮನೆಯ ಮುಂಭಾಗದಲ್ಲಿ ಕಲ್ಪಿಸಿದ್ದರು.

# ಸಕಲ ಜೀವ ರಾಶಿಗೂ ನೀರು ಅತ್ಯವಶ್ಯಕ: ನ್ಯಾಯಾಧೀಶೆ ಮಂಜುಳಾ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ನೀರು ಕೇವಲ ಮನುಷ್ಯರ ಅವಶ್ಯಕತೆಗೆ ಮಾತ್ರವಲ್ಲ, ಪ್ರಾಣಿ-ಪಕ್ಷಿಗಳ ಬದುಕಿನ ಮೂಲವೂ ಆಗಿದೆ. ಬೇಸಿಗೆ ತೀವ್ರಗೊಂಡು, ನೀರಿನ ಮೂಲಗಳು ಒಣಗುತ್ತಿವೆ. ನೀರಿಗಾಗಿ ಮೂಕ ಜೀವಿಗಳು ಅಲೆದಾಡುವ ವಾಸ್ತವ ಅರಿತು ಜನರು ಮಾನವೀಯತೆ ಬೆಳೆಸಿಕೊಳ್ಳುವುದು ಮುಖ್ಯವೆಂದು ಪ್ರಧಾನ ಮತ್ತು ಜಿಲ್ಲಾ ಸತ್ರ ನ್ಯಾಯಾಧೀಶೆ ಮಂಜುಳಾ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಕೀಲರ ಸಂಘ ಹಾಗೂ ವಾಟರ್ ಫಾರ್ ವಾಯ್ಸ್‌ಲೆಸ್ ಸಂಯುಕ್ತಾಶ್ರಯದಲ್ಲಿ ವಿಶ್ವಜಲ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ಅರಿವು-ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ನಾವು ನಿತ್ಯ ಜೀವನದಲ್ಲಿ ನೀರನ್ನು ಹಲವಾರು ರೀತಿ ಬಳಸುತ್ತೇವೆ. ಆದರೆ, ನಮ್ಮ ಸುತ್ತಲಿನ ಮೂಕ ಜೀವಿಗಳಿಗೆ ನೀರು ಸಿಗುತ್ತಿದೆಯೇ ಎಂಬುದನ್ನು ಯೋಚಿಸುವ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಬೇಸಿಗೆ ಉರಿಯುತ್ತಿರುವ ಈ ದಿನಗಳಲ್ಲಿ ಪಕ್ಷಿಗಳು, ಬೀದಿ ಪ್ರಾಣಿಗಳು ನೀರಿಗಾಗಿ ಪರದಾಡುವ ದೃಶ್ಯ ಸಾಮಾನ್ಯವಾಗುತ್ತಿದೆ. ಹಾಗಾಗಿ ಮನೆಗಳ ಮುಂದೆ, ತೋಟಗಳಲ್ಲಿ, ರಸ್ತೆ ಬದಿ ಸಣ್ಣ ಪಾತ್ರೆಗಳಲ್ಲಿ ನೀರು ಇಡುವುದೂ ಒಂದು ಮಹತ್ವದ ಸೇವೆಯಾಗಿದೆ. ಒಂದು ಪಾತ್ರೆ ನೀರು ಇಡುವುದರಿಂದ ಒಂದು ಜೀವ ಉಳಿಯಬಹುದು, ಇದು ನಮ್ಮ ಸಣ್ಣ ಪ್ರಯತ್ನ, ಆದರೆ ಅದರ ಪರಿಣಾಮ ಬಹಳ ದೊಡ್ಡದು ಎಂದರು.

ನೀರು ಅಮೂಲ್ಯವಾಗಿದ್ದು, ಇದರಿಂದ ಜೀವ ಉಳಿಸಬಹುದು. ಹಾಗಾಗಿ ಮನುಷ್ಯ ತಾನು ಬದುಕುವುದರ ಜೊತೆಗೆ ಪ್ರಾಣಿ-ಪಕ್ಷಿಗಳಿಗೂ ಕೂಡ ನೀರು ಉಳಿಸಿ

ದಯೆ ತೋರಬೇಕು. ಮಾನವೀಯತೆ ಕೇವಲ ಮಾತಿನಲ್ಲಿ ಮಾತ್ರವಲ್ಲ, ಕೃತಿಯಲ್ಲಿ ಕಾಣಬೇಕು. ಪ್ರಾಣಿ-ಪಕ್ಷಿಗಳಿಗೂ ಬದುಕುವ ಹಕ್ಕಿದೆ ಎಂಬ ಅರಿವು ಸಮಾಜದಲ್ಲಿ ಬೇರೂರಬೇಕು. ಮೂಕ ಜೀವಿಗಳು ತಮ್ಮ ನೋವನ್ನು ಹೇಳಿಕೊಳ್ಳಲಾರವು. ಆದ್ದರಿಂದ ಅವರ ಪರವಾಗಿ ನಾವು ಯೋಚಿಸಬೇಕು. ಅವರ ರಕ್ಷಣೆಗೆ ಮುಂದಾಗುವುದು ನಮ್ಮ ನೈತಿಕ ಕರ್ತವ್ಯ ಎಂದು ಹೇಳಿದರು.

ಇದೇ ವೇಳೆ, ನೀರಿನ ಮೌಲ್ಯ ನೆನಪಿಸಿದ ಅವರು, ನೀರನ್ನು ವ್ಯರ್ಥ ಮಾಡುವ ಪ್ರತಿಯೊಂದು ಕ್ಷಣವೂ ಭವಿಷ್ಯಕ್ಕೆ ಅಪಾಯದ ಸೂಚನೆ. ನಾವು ಬಳಸುವ ಪ್ರತಿಯೊಂದು ಹನಿ ನೀರಿಗೂ ಬೆಲೆ ಇದೆ. ಅದನ್ನು ಜವಾಬ್ದಾರಿಯುತವಾಗಿ ಬಳಸಬೇಕು ಎಂದು ಎಚ್ಚರಿಸಿದರು.

ವಕೀಲರ ಸಂಘದ ಅಧ್ಯಕ್ಷ ಕಾರ್ಲೆ ಮೊಗಣ್ಣಗೌಡ, 2ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಎಂ.ಶೈಲಾ, ಕೌಟಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶ ಮೊಹಮ್ಮದ್ ಅಶ್ರಫ್, ಎಫ್‌ಟಿಎಸ್‌ಸಿ-1 ಅಧಿಕ ಜಿಲ್ಲಾ ನ್ಯಾಯಾಧೀಶ ಹೆಚ್.ಎಂ.ದೇವರಾಜು, ಹಿರಿಯ ಸಿವಿಲ್ ನ್ಯಾಯಾಧೀಶೆ ಜಿ.ಕೆ.ದಾಕ್ಷಾಯಿಣಿ ಇದ್ದರು.

# ಜಿಲ್ಲೆಯ ಕೃಷಿ ಸಮಸ್ಯೆಯನ್ನು ಸಂಸತ್ತಿನಲ್ಲಿ ತೆರೆದಿಟ್ಟ ಸಂಸದ ಶ್ರೇಯಸ್

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ತೆಂಗು ಬೆಳೆಗೆ ಉತ್ತೇಜನ ನೀಡುವ ಉದ್ದೇಶದಿಂದ ತೆಂಗು ಬೆಳೆಯನ್ನು ಸಸ್ಯ ಸಂರಕ್ಷಣಾ ಯೋಜನೆಗೆ ಸೇರ್ಪಡೆಗೊಳಿಸಿ, ಪ್ರಯೋಗಾಲಯ ಉನ್ನತೀಕರಣಕ್ಕೆ ಸಹಕಾರ ನೀಡಬೇಕೆಂದು ಸಂಸದ ಶ್ರೇಯಸ್ ಪಟೇಲ್ ಅವರು ಲೋಕಸಭೆ ಅಧಿವೇಶನದಲ್ಲಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಕಲಾಪದ ವೇಳೆ ಮಾತನಾಡಿದ ಅವರು, ಹಾಸನ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ 1.8 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೆಂಗು ಬೆಳೆಯಲಾಗಿದ್ದು, ವಾಣಿಜ್ಯ ಬೆಳೆಗೆ ವಿವಿಧ ರೋಗ ಕಾಣಿಸಿಕೊಂಡಿದೆ. ಹಾಗಾಗಿ ತೆಂಗು ಬೆಳೆಗೆ ಉತ್ತೇಜನ ನೀಡಲು ಹೆಚ್ಚಿನ ಅನುದಾನ ನೀಡಬೇಕು. ಅಲ್ಲದೇ ಹಾಸನ ಜಿಲ್ಲೆಯಲ್ಲಿ ಮಳೆಯಿಂದ ಹಾನಿಗೊಳಗಾಗಿರುವ ಕೃಷಿ ಹಾಗು ತೋಟಗಾರಿಕೆ ಬೆಳೆಗಳಿಗೆ ಸೂಕ್ತ ಪರಿಹಾರ ನೀಡುವಂತೆ ಇದೇ ವೇಳೆ ಸರ್ಕಾರವನ್ನು ಆಗ್ರಹಿಸಿದರು.



ಜಿಲ್ಲೆಯ 1.1 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಮೆಕ್ಕೆಜೋಳ ಬೆಳೆಯಲಾಗಿತ್ತು. ಜಿಲ್ಲೆಯ ಎಲ್ಲಾ ತಾಲ್ಲೂಕಿನಲ್ಲೂ ಬೆಳೆ ಹಾನಿಗೊಳಗಾಗಿದೆ. ಈ ಬಗ್ಗೆ ಕಳೆದ ಅಧಿವೇಶನದಲ್ಲೂ ಪ್ರಸ್ತಾಪ ಮಾಡಿದ್ದೆ. ಆದ್ದರಿಂದ ಬಿಳಿಸುಳಿ ರೋಗಕ್ಕೆ ಒಳಗಾಗಿ ನಷ್ಟಹೊಂಡಿರುವ ರೈತರಿಗೆ ಸೂಕ್ತ ಪರಿಹಾರ ಕೊಡಬೇಕು. ಜಿಲ್ಲೆಯಲ್ಲಿ ರಾಜಮುಡಿ ಭತ್ತವನ್ನು ಬೆಳೆಯಲಿದ್ದು, ಆ ಅಕ್ಕಿಗೆ ಉತ್ತಮ ಬೇಡಿಕೆ ಮತ್ತು ರುಚಿಕರ ಎಂಬ ಮೆಚ್ಚುಗೆ ಪಡೆದಿದೆ. ಹಾಗಾಗಿ ಅದಕ್ಕೆ ಉತ್ತೇಜನ ನೀಡಬೇಕು ಹಾಗು ಜಿಲ್ಲೆಯಲ್ಲಿ ಅತಿವೃಷ್ಟಿಯಿಂದ ಹಲವು ರೀತಿಯ ಬೆಳೆ ಹಾಳಾಗಿವೆ. ಹಾಗೆಯೇ ಬರುವ ಜೂನ್‌ನಲ್ಲಿ ಮುಂಗಾರು ಆರಂಭ ಆಗಲಿದ್ದು, ಅದಕ್ಕೆ ಬೇಕಾದ ಸಮರ್ಪಕ ರಸಗೊಬ್ಬರ, ಬಿತ್ತನೆ ಬೀಜ ಪೂರೈಸುವಂತೆ ಮನವಿ ಮಾಡಿದರು.

# ಕೊಣನೂರು ದೊಡ್ಡಕೆರೆ ಏರಿ ಕಾಮಗಾರಿ ಪರಿಶೀಲನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ಕೊಣನೂರು ದೊಡ್ಡಕೆರೆ ಕುಸಿದಿದ್ದ ಕೆರೆ ಏರಿ ಮೇಲಿನ ರಸ್ತೆಯ ಕಾಮಗಾರಿ ನಡೆಯುವ ಸ್ಥಳಕ್ಕೆ ಶಾಸಕ ಎ.ಮಂಜು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಇಲ್ಲಿನ ದೊಡ್ಡಕೆರೆಯ ಏರಿ ಮೇಲಿನ ರಸ್ತೆಯು ಈ ಹಿಂದೆ ಭಾರೀ ಮಳೆಗೆ ಕುಸಿತ ಕಂಡು ವಾಹನ ಹಾಗೂ ಸಾರ್ವಜನಿಕ ಓಡಾಟಕ್ಕೆ ತೊಂದರೆಯಾಗುತ್ತಿದೆ.

ಆದ್ದರಿಂದ 6 ಕೋಟಿ ರೂ. ವೆಚ್ಚದಲ್ಲಿ ಭೂಮಿಪೂಜೆ ಸಲ್ಲಿಸಿ ಮಳೆಯು ಆರಂಭವಾಗುವ ಮೊದಲು ಗುಣಮಟ್ಟದಲ್ಲಿ ಕಾಮಗಾರಿಯನ್ನು ಶೀಘ್ರವಾಗಿ ಮುಗಿಸಿ ಎಂದು ತಿಳಿಸಲಾಗಿತ್ತು. ಗುತ್ತಿಗೆದಾರರು ಭರದಿಂದ ಕಾಮಗಾರಿ ನಡೆಸುತ್ತಿದ್ದಾರಾದರೂ ಈ ಕಾಮಗಾರಿ ಶೀಘ್ರವಾಗಿ ಮುಗಿಯಲು ಈ



ಭಾಗದಲ್ಲಿ ಓಡಾಡುವ ವಾಹನ ಸವಾರರು ಹಾಗೂ ಸಾರ್ವಜನಿಕರ ಸಹಕಾರ ಕಡಿಮೆ ಇರುವುದು ತಿಳಿದು ಬಂದಿದ್ದು ಸಾರ್ವಜನಿಕರು ಸ್ವಲ್ಪ ದಿನ ಕಷ್ಟವಾದರೂ ಈ ರಸ್ತೆಯಲ್ಲಿ ಓಡಾಡದೇ ಬದಲಿ ಮಾರ್ಗಗಳಲ್ಲಿ ಸಂಚರಿಸಿ ಸುಗಮವಾಗಿ ಕಾಮಗಾರಿ ನಡೆಯುವುದಕ್ಕೆ ಅವಕಾಶ ಮಾಡಿಕೊಡುವ ಮೂಲಕ ಸಹಕರಿಸಬೇಕು ಎಂದರು.

ಇನ್ನು ಮುಂದೆ ಈ ರಸ್ತೆಯಲ್ಲಿ ಯಾವುದೇ ನಾಲ್ಕು ಚಕ್ರದ ವಾಹನ ಹಾಗೂ ಭಾರೀ ವಾಹನಗಳು ಓಡಾಡದಂತೆ ಹಾಗೂ ದ್ವಿಚಕ್ರ ವಾಹನಗಳು ಮಾತ್ರ ಓಡಾಡುವಂತೆ ಮಾಡಿ ಕಾಮಗಾರಿಯನ್ನು ಒಂದು ತಿಂಗಳೊಳಗಾಗಿ ಮುಗಿಸಿ ಎಂದು ಗುತ್ತಿಗೆದಾರರಿಗೆ ತಿಳಿಸಿದ್ದೇನೆ, ಹಾಗೂ ಈ ಭಾಗದಲ್ಲಿ ವಾಹನಗಳು ಓಡಾಡದಂತೆ ರಸ್ತೆಯ ಮೇಲೆ ಮಣ್ಣನ್ನು ಹಾಕಿ ಆ ಮಣ್ಣನ್ನು ಯಾರಾದರೂ ತೆರವುಗೊಳಿಸುತ್ತಾರಾ ಎಂದು ನೋಡಲು ಸಿಸಿ ಕ್ಯಾಮೆರಾ ಅಳವಡಿಸಿ ಎಂದು ಸೂಚಿಸಿದ್ದು ಯಾರಾದರೂ ಮಣ್ಣನ್ನು ತೆರವುಗೊಳಿಸಿದರೆ ಅವರ ವಿರುದ್ಧ ಕಾನೂನು ಕ್ರಮಕ್ಕೆ ಮುಂದಾಗಿ ಎಂದು ಸೂಚನೆ ನೀಡಿದ್ದೇನೆ ಎಂದು ಹೇಳಿದರು.

ಗುತ್ತಿಗೆದಾರರಾದ ಬಿ.ಪಿ. ಕುಮಾರ್, ಎಸ್.ವಿ. ಲೋಕೇಶ್, ಮುಖಂಡರುಗಳಾದ ಶಿವಮೂರ್ತಿ, ಕುಮಾರ್, ದೇವು ಇತರರಿದ್ದರು.

# ಏ. 5ರಂದು ಆರೋಗ್ಯ ತಪಾಸಣೆ ಶಿಬಿರ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಸಾರಿಗೆ ಬಸ್ ನಿಲ್ದಾಣ ಸಮೀಪದ ಎ.ವಿ.ಕಾಂತಮ್ಮ ಮಹಿಳಾ ಕಾಲೇಜಿನಲ್ಲಿ ಏ. 5ರ ಭಾನುವಾರ ಸ್ಮೈಲ್ಸ್ ಇನ್ಸಿಟ್ಯೂಟ್ ಆಫ್ ಗ್ಯಾಸ್ಟ್ರೋ ಎಂಟೆರೊಲೊಜಿ ವತಿಯಿಂದ ಆರೋಗ್ಯ ಉಚಿತ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ.

ಅಂದು ಬೆಳಿಗ್ಗೆ 10 ರಿಂದ ಸಂಜೆ 5ರ ವರೆಗೆ ತಪಾಸಣೆ ನಡೆಯಲಿದೆ. ಡಾ|| ಸಿ.ಎಂ. ಪರಮೇಶ್ವರ್ ಅವರ ನೇತೃತ್ವದಲ್ಲಿ ಶಿಬಿರ ನಡೆಯಲಿದ್ದು ಪೈಲ್ಸ್, ಫಿಷರ್, ಫಿಸ್ತುಲಾ ಅಥವಾ ಕರುಳಿನ ಕ್ಯಾನ್ಸರ್‌ಗೆ ಸಂಬಂಧಿಸಿದ ಕಾಯಿಲೆಗಳಿಂದ ಬಳಲುತ್ತಿರುವವರು ಪಾಲ್ಗೊಳ್ಳಬಹುದು.

ಮೂಲವ್ಯಾದಿಗೆ ಸಂಬಂಧಿಸಿ ಕಾಯಿಲೆ ಕುರಿತು ಅರಿವು ಮೂಡಿಸುವುದು ಹಾಗು ಸೂಕ್ತ ಚಿಕಿತ್ಸೆ ಈ ಶಿಬಿರದ ಉದ್ದೇಶವಾಗಿದೆ. ಮಹಿಳೆಯರಿಗೆ ಮಹಿಳಾ ವೈದ್ಯರಿಂದಲೇ ಸಮಾಲೋಚನೆ ನಡೆಯಲಿದೆ. ನೋಂದಣಿಗೆ 9355521481 ಇಲ್ಲಿಗೆ ಸಂಪರ್ಕಿಸಲು ಕೋರಿದೆ.

# ಇತಿಹಾಸದಲ್ಲಿ ಈ ದಿನ

## ಏಪ್ರಿಲ್-04

1949: **NATO** (ಉತ್ತರ ಅಟ್ಲಾಂಟಿಕ್ ಒಪ್ಪಂದ ಸಂಸ್ಥೆ) ಸ್ಥಾಪನೆಯಾಯಿತು.

1975: **Microsoft** ಸಂಸ್ಥೆಯನ್ನು **Bill Gates** ಹಾಗೂ **Paul Allen** ಸ್ಥಾಪಿಸಿದರು.

1969: **Apollo** 12 **mission crew announcement** 12ತಂಡದ ಸದಸ್ಯರ ಘೋಷಣೆ ಮಾಡಲಾಯಿತು.

2013: ನ್ಯೂಯಾರ್ಕ್‌ನ **World Trade Center** ಪ್ರದೇಶದಲ್ಲಿರುವ **One World Trade Center** ಕಟ್ಟಡ ನಿರ್ಮಾಣ ಪೂರ್ಣಗೊಂಡಿತು.

**ಜನನ**

1965: **Robert Downey Jr.** ಹಾಲಿವುಡ್ ನಟ

**ಮರಣ**

1968: **Martin Luther King Jr**, ಅಮೆರಿಕದ ನಾಗರಿಕ ಹಕ್ಕುಗಳ ಹೋರಾಟಗಾರ

2013: **Roger Ebert**, ಪ್ರಸಿದ್ಧ ಚಲನಚಿತ್ರ ವಿಮರ್ಶಕ

# ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ಜಾತ್ರಾ ಮಹೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲೂಕಿನ ಸುಕ್ಷೇತ್ರ ಯಾದಾಪುರದ ಬೆಟ್ಟದ ಮೇಲೆ ನೆಲೆಸಿರುವ ನಾಡಿನ ಲಕ್ಷಾಂತರ ಭಕ್ತರ ಆರಾಧ್ಯ ದೈವ ಜೇನುಕಲ್ಲು ಸಿದ್ದೇಶ್ವರ ಸ್ವಾಮಿ ಮಹಾ ರಥೋತ್ಸವ ಭಕ್ತರ ಶ್ರದ್ಧಾ ಭಕ್ತಿಯಿಂದ ಜರುಗಿತು.

ಬಸವನ ಉತ್ಸವ, ಪಲ್ಲಕ್ಕಿ ಉತ್ಸವ, ಬಿಲ್ವಪತ್ರೆ ಉತ್ಸವ ಹೀಗೆ ನಾನಾ ಉತ್ಸವಗಳು ದೇವಾಲಯದ ಸಂಪ್ರದಾಯದಂತೆ ರಾತ್ರಿ ಪೂರ ನಡೆಯಿತು. ಮುಂಜಾನೆ ಬಾನಂಗಳದಲ್ಲಿ ಸೂರ್ಯ ಉದಯಿಸುತ್ತಿದ್ದಂತೆ ಇತ್ತ ಶೃಂಗರಿಸಿದ್ದ ರಥ ಮಂಟಪದಲ್ಲಿ ಸಿದ್ದೇಶ್ವರ ಸ್ವಾಮಿಯ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮಹಾಮಂಗಳಾರತಿ ಬೆಳಗುತ್ತಿದ್ದಂತೆ ಈ ಶುಭ ಗಳಿಗೆಗಾಗಿ ಕಾಯುತ್ತಿದ್ದ ಭಕ್ತರ ದಂಡು ಸಿದ್ದೇಶ್ವರ ಸ್ವಾಮಿಯ ನಾಮ ಸ್ಮರಣೆ ಮಾಡುತ್ತಾ ರಥವನ್ನು ಎಳೆದು ಪುಳಕಿತರಾದರು.



ಜಾತ್ರಾ ಮಹೋತ್ಸವ ಅಂಗವಾಗಿ ಬೆಟ್ಟದ ಮೇಲೆ ಇರುವ ಸಿದ್ದೇಶ್ವರ ಸ್ವಾಮಿಯ ಪಾದಗಳಿಗೆ ನಾನಾ ಬಗ್ಗೆ ಅಭಿಷೇಕಗಳು ವಿವಿಧ ಅರ್ಚನೆಗಳು ವೇದ ಘೋಷಗಳೊಂದಿಗೆ ದೇವಾಲಯದ ಅರ್ಚಕರ ವೃಂದ ನೆರವೇರಿಸಿಕೊಟ್ಟರೆ ಜೇನುಕಲ್ಲು ಸಿದ್ದೇಶ್ವರ ಸ್ವಾಮಿಯ ಉತ್ಸವ ಮೂರ್ತಿಗೆ ಮಾಡಲಾಗಿದ್ದ ವಿಶೇಷ ಅಲಂಕಾರ ಭಕ್ತರ ಕಣ್ಮನ ಸೆಳೆಯುವಂತಿತ್ತು.

ತಾಲೂಕು ಜಿಲ್ಲೆಯಿಂದ ಮಾತ್ರವಲ್ಲದೆ ನಾಡಿನ ನಾನಾ ಭಾಗಗಳಿಂದ ಆಗಮಿಸಿದ್ದ ಲಕ್ಷಾಂತರ ಭಕ್ತರು ಜೇನುಕಲ್ಲು ಸಿದ್ದೇಶ್ವರ ಸ್ವಾಮಿಯ ಜಾತ್ರಾ ಮಹೋತ್ಸವವನ್ನು ಕಣ್ತುಂಬಿಕೊಂಡರೆ ಭಕ್ತಿ ಭಾವದೊಂದಿಗೆ ಸಿದ್ದೇಶ್ವರ ಸ್ವಾಮಿಯ ನಾಮಸ್ಮರಣೆಯಲ್ಲಿ ಭಕ್ತರು ಮೈಮರೆತಿದ್ದು, ಸಾಮಾನ್ಯವಾಗಿ ಕಂಡು ಬಂತು.

ಜಾತ್ರಾ ಮಹೋತ್ಸವದಲ್ಲಿ ಮಂಗಳವಾದ್ಯ ಸೇರಿದಂತೆ ವೀರಗಾಸೆ ವೀರಭದ್ರ ಕುಣಿತ ನಂದಿ ಧ್ವಜ ಕುಣಿತ ಹೀಗೆ ಜಾನಪದ ಕಲಾತಂಡಗಳ ಕಲಾವಿದರು ಪ್ರದರ್ಶಿಸಿದ ತಮ್ಮ ಕಲಾ ಪ್ರದರ್ಶನ ಜಾತ್ರಾ ಮಹೋತ್ಸವದ ರಂಗನ್ನು ಮತ್ತಷ್ಟು ಹೆಚ್ಚಿಸುವಂತೆ ಮಾಡಿತು.

ಲಕ್ಷಾಂತರ ಭಕ್ತರು ಸೇರುವ ಮಾಹಿತಿ ಹರಿದಿರುವ ಪೊಲೀಸರು ಜಾತ್ರಾ ಮಹೋತ್ಸವದಲ್ಲಿ ಯಾವುದೇ ರೀತಿಯ ಅಹಿತಕರ ಘಟನೆ ಸಂಭವಿಸದಂತೆ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಂಡಿದ್ದರೆ ಇನ್ನು ನಗರದಿಂದ 6 ಕಿಲೋಮೀಟರ್ ದೂರವಿರುವ ಯಾದಾಪುರ ಕ್ಷೇತ್ರಕ್ಕೆ ಹೋಗಿ ಬರಲು ಭಕ್ತರಿಗೆ ಅನುವಾಗುವ ರೀತಿಯಲ್ಲಿ ರಾಜ್ಯ ಸಾರಿಗೆ ಸಂಸ್ಥೆ ನಿರಂತರವಾಗಿ ಬಸ್ ವ್ಯವಸ್ಥೆ ಕಲ್ಪಿಸಿಕೊಟ್ಟಿತ್ತು.

ಜಾತ್ರಾ ಮಹೋತ್ಸವದಲ್ಲಿ ಪಾಲ್ಗೊಂಡ ಲಕ್ಷಾಂತರ ಭಕ್ತಾದಿಗಳಿಗೆ ದೇವಾಲಯದ ಅಭಿವೃದ್ಧಿ ಸಮಿತಿ ನಿರಂತರ ದಾಸೋಹ ವ್ಯವಸ್ಥೆಯನ್ನು ಪ್ರತಿ ವರ್ಷದಂತೆ ಈ ವರ್ಷವೂ ಸಹ ಕೈಗೊಂಡಿತ್ತು.

# ಕಡೇಗರ್ಜೆಯಲ್ಲಿ ಶನೈಶ್ಚರ ಸ್ವಾಮಿ ಜಾತ್ರಾ ಮಹೋತ್ಸವ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರೇಹಳ್ಳಿ: ಬೇಲೂರು ತಾಲ್ಲೂಕು ಅರೇಹಳ್ಳಿ ಹೋಬಳಿ ಕಡೇಗರ್ಜೆ ಗ್ರಾಮದಲ್ಲಿ 12ನೇ ವರ್ಷದ ಶ್ರೀ ಗುರು ಶನೈಶ್ಚರ ಸ್ವಾಮಿ ಜಾತ್ರಾ ಮಹೋತ್ಸವ ಪ್ರಧಾನ ಅರ್ಚಕ ಅಶೋಕ್ ಸ್ವಾಮಿ ನೇತೃತ್ವದಲ್ಲಿ ಜರುಗಿತು.

ಕೊಂಡೋತ್ಸವ ಹಾಗೂ ಸ್ವಾಮಿಯವರನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ 108 ಕುಂಭ ಕಳಸ ಮತ್ತು ಮಾದೇಶ್ವರ ಮಂಗಳ ವಾದ್ಯಗೋಷ್ಟಿಯೊಂದಿಗೆ ರಾಜ ಬೀದಿಯಲ್ಲಿ ಮೆರವಣಿಗೆ ನಡೆಸಲಾಯಿತು.

ಮಹೋತ್ಸವದ ರಾತ್ರಿ ಶನಿ ಪ್ರಭಾವ ಅಥವಾ ರಾಜಾ ಸತ್ಯವ್ರತ ಎಂಬ ಪೌರಾಣಿಕ ಹರಿಕಥೆಯನ್ನು ಏರ್ಪಡಿಸಲಾಗಿತ್ತು. ಸುತ್ತಲಿನ ಗ್ರಾಮಗಳ ಭಕ್ತಾದಿಗಳು ಪೂಜೋತ್ಸವ ಯಶಸ್ವಿಗೊಳಿಸಿದರು.

ಅನ್ನ ಸಂತರ್ಪಣೆಗೆ ದೇಣಿಗೆ ನೀಡಿದ



ಸೈಯ್ಯದ್ ವೇರ್ಝ್ ಹಾಗು ಮಹೇಂದ್ರ ಅವರನ್ನು ಸನ್ಮಾನಿಸಲಾಯಿತು.

ಗ್ರಾಮದ ಅನಿಲ್, ಋತ್ವಿನ್, ಅರ್ಜುನ್, ಪ್ರಜ್ವಲ್, ಪ್ರದೀಪ್, ರಕ್ಷಿತ್, ದರ್ಶನ್, ಸಚಿನ್, ರುದ್ರೇಶ್, ವಿಜಯ್, ರಮೇಶ್, ಮನು, ಪ್ರಸಾದ್, ಆದರ್ಶ, ನಿತಿನ್, ಶಿವಾನಂದ ಇದ್ದರು.

# ಪುರುಷ-ಸ್ತ್ರೀ ಸಮಾನತೆಯೇ ಸಮಾಜ ಏಳಿಗೆಗೆ ಕಾರಣ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸಮಾನತೆ ಎಂದರೆ ನಾನು ಹೆಚ್ಚು, ನೀನು ಕಡಿಮೆ ಎನ್ನುವುದಲ್ಲ. ಗಂಡು-ಹೆಣ್ಣು ಒಟ್ಟಾಗಿ ಹೋಗುವುದಾಗಿದೆ ಎಂದು ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಭಾರತಿ ರಾಜಶೇಖರ್ ಅಭಿಪ್ರಾಯಪಟ್ಟರು.

ನಗರದ ಎಂ.ಜಿ.ರಸ್ತೆಯಲ್ಲಿರುವ ಎಂ.ಕೃಷ್ಣ ಕಾನೂನು ಕಾಲೇಜಿನಲ್ಲಿ ಆಯೋಜಿಸಿದ್ದ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮಲ್ಲಿ ಸಾಕಷ್ಟು ಜನರು ವಿದ್ಯಾವಂತರಿದ್ದರೂ ಲೈಂಗಿಕ ದೌರ್ಜನ್ಯ ಪ್ರಕರಣಗಳ ನಡೆಯುತ್ತಿರುವುದು ಭಯದ ವಾತಾವರಣ ಸೃಷ್ಟಿಸಿವೆ ಎಂದರು.

ಮನುಷ್ಯರಾಗಿ ಹುಟ್ಟಿದ ನಾವುಗಳು ಸಮಾಜಕ್ಕೆ ಯಾವುದಾದರೂ ಒಂದು ರೀತಿಯಲ್ಲಿ ಅನುಕೂಲವಾಗುವಂತಹ ಕೊಡುಗೆಗಳನ್ನ ನೀಡಬೇಕು. ಭಾರತೀಯ ಸಂಸ್ಕೃತಿಯು ಉತ್ತಮ ತತ್ವ, ಆಚರಣೆಗಳನ್ನು ಹೊಂದಿರುವುದು ನಮಗೆಲ್ಲ ಹೆಮ್ಮೆಯ ವಿಚಾರ. ಆದರೆ, ಇತ್ತೀಚೆಗೆ ಅದು ಸೊರಗುತ್ತಿರುವುದು ಆಘಾತಕಾರಿ ಬೆಳವಣಿಗೆ ಎಂದರು.

ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದ ಚಿತ್ರನಟಿ ಕಾರುಣ್ಯ ರಾಮ್ ಮಾತನಾಡಿ, ಮಾರ್ಚ್ 8ರಂದು ಮಾತ್ರ ಮಹಿಳಾ ದಿನಾಚರಣೆ ಮಾಡುವುದಲ್ಲ ಪ್ರತಿದಿನ ಅದನ್ನ ನೆನಪಿಸಿಕೊಳ್ಳಬೇಕು. ಸಮಾಜದಲ್ಲಿ ಪೊಲೀಸರು, ವಕೀಲರು, ವೈದ್ಯರು ಎಲ್ಲರಿಗೂ ನೆರವಾಗುವಂತಹ ಕೆಲಸ ಮಾಡುತ್ತಾರೆ. ಅದೇ ರೀತಿ ಈ ಕಾಲೇಜಿನ ವಿದ್ಯಾರ್ಥಿಗಳಾದ ನೀವು ಕೂಡ ಸಮಾಜಕ್ಕೆ ಅನುಕೂಲವಾಗುವಂತಹ ಸಲಹೆ ಸಹಕಾರ ನೀಡಿ ಎಂದು ಹಾರೈಸಿದ ಅವರು ಎಲ್ಲರನ್ನೂ ಗೌರವದಿಂದ ನೋಡೋಣ, ವಯಸ್ಸಿಗೆ ತಕ್ಕಂತೆ ಜೀವನವನ್ನು ಅನುಭವಿಸೋಣ ಎಂದು ಹೇಳಿದರು.

ಪ್ರಾಂಶುಪಾಲ ಡಾ.ವಿ.ಶ್ರೀನಿವಾಸ್ ಮಾತನಾಡಿ, 1908 ಮಾರ್ಚ್ 8ರಂದು ನ್ಯೂಯಾರ್ಕ್ ನಲ್ಲಿ ಪ್ರಾರಂಭವಾದ ಮಹಿಳಾ ಶೋಷಣೆಯಯ ವಿರುದ್ಧ ಹೋರಾಟವನ್ನ ವಿಶ್ವಸಂಸ್ಥೆಯು 1925ರಿಂದ ವಿಶ್ವ ಮಹಿಳಾ ದಿನಾಚರಣೆಯಾಗಿ ಆಚರಿಸಲು ಪ್ರಾರಂಭಿಸಿತು. ಇಂದಿಗೂ ಕೂಡ ಅನೇಕ ಕಡೆ ಮಹಿಳಾ ಶೋಷಣೆಗಳು ನಡೆಯುತ್ತಿದ್ದು ಅವುಗಳನ್ನೂ ತೊಡೆದುಹಾಕುವ ಕೆಲಸ ಎಲ್ಲರಿಂದ ಆಗಬೇಕು ಎಂದರು.

ಕಾರ್ಯಕ್ರಮದ ಸಂಯೋಜಕಿ ಸಹಾಯಕ ಪ್ರಾಧ್ಯಾಪಕಿ ಕೆ.ಎಸ್.ರೇಖಾ, ಕಾಲೇಜು ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ಕಾನೂನು ವಿದ್ಯಾರ್ಥಿಗಳು ಹಾಜರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248